ನೆರವು ನೀಡುವ ನೀತಿಯಲ್ಲಿ ಬದಲಾವಣೆ ಆದ್ದರಿಂದ ಕಾರಂಜ ನೀರಾವರಿ ಯೋಜನೆಗೆ ನಬಾರ್ಡ್ ಯಾವ ನೆರವನ್ನೂ ಮಂಜೂರು ಮಾಡಿಲ್ಲ. ಈ ಯೋಜನೆಗೆ ಕೇಂದ್ರಸರ್ಕಾರವು ಎ.ಐ.ಬಿ.ಪಿ. ಅಡಿಯಲ್ಲಿ 15 ಕೋಟಿ ರೂ. ಸಾಲದ ನೆರವನ್ನು ಮಂಜೂರು ಮಾಡಿದೆ.

ವಿಷಯ: ರಾಣಿಬೆನ್ನೂರ ತಾಲ್ಲೂಕು ತುಮ್ಮಿನಕಟ್ಟಿಯಲ್ಲಿ ಗ್ರಿಡ್ ಪೂರ್ಣಗೊಳಿಸುವುದು.

864 (1225)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರಿನಲ್ಲಿ 220 ಕೆ.ವಿ.ಗ್ರಿಡ್ ಹಾಗೂ ರಾಣಿಬೆನ್ನೂರ ತಾಲ್ಲೂಕು ತುಮ್ಮಿನಕಟ್ಟಿಯಲ್ಲಿ ಗ್ರಿಡ್ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಶರಣಬಸಪ್ಪ ದರ್ಶನಾಪೂರ (ಇಂಧನ ರಾಜ್ಯ ಸಚಿವರು):

ಅ) ರಾಣಿಬೆನ್ನೂರಿನಲ್ಲಿ 220 ಕೆ.ವಿ.ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕೆಲಸವು ಮುಕ್ತಾಯದ ಹಂತದಲ್ಲಿದೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು. ರಾಣಿಬೆನ್ನೂರು ತಾಲ್ಲೂಕು ತುಮ್ಮಿಕಟ್ಟೆಯಲ್ಲಿ 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕೆಲಸವೂ ಸಹ ಪ್ರಗತಿಯಲ್ಲಿದೆ. ಈ ಕಾಮಗಾರಿಯನ್ನು ಇನ್ನು 2-3 ತಿಂಗಳೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ವಿಷಯ: ಹಿರೇಕೆರೂರು ತಾಲ್ಲೂಕು ಹಳ್ಳೂರಿನಲ್ಲಿ ಗ್ರಿಡ್ ಸಲುವಾಗಿ ಭೂಸ್ವಾಧೀನ ಪ್ರಕರಣ.

867 (1223)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಹಳ್ಳೂರಿನಲ್ಲಿ ಗ್ರಿಡ್ ಸ್ಥಾಪಿಸಲು ಭೂಸ್ವಾಧೀನ ಪ್ರಕರಣ ಯಾವ ಹಂತದಲ್ಲಿದೆ.

ಆ) ಕೆ.ಇ.ಬಿ.ಯಿಂದ ಭೂಸ್ವಾಧೀನ ಆದೇಶದ ಬಗ್ಗೆ ಹಣ ಬಿಡುಗಡೆ ಮಾಡಲಾಗಿದೆಯೇ.